ಕರ್ನಾಟಕ ವಿಧಾನಸಭೆ

ಬುಧವಾರ 19ನೇ ಏಪ್ರಿಲ್ 2000 ದಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಂ.ವಿ.ವೆಂಕಟಪ್ಪ) ಅವರು, ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹುಕ್ಕೇರಿ ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನನಗೆ ಐದು ನಿಮಿಷ ಕಾಲಾವಕಾಶ ಕೊಡಿ.

ಅಧ್ಯಕ್ಷರು : ಆಯಿತು, ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಎಂ.ಎಸ್.ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಸಂಖ್ಯೆ 2618 ಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಂದಿಲ್ಲ.

ಅಧ್ಯಕ್ಷರು : ಈಗ ತಾನೇ ಮಂತ್ರಿಗಳು ಸದನದಲ್ಲಿ ಇದ್ದರು; ಅವರು ಎಲ್ಲಿಗೆ ಹೋದರು? ಆಯಿತು; ಅವರು ಬಂದ ಮೇಲೆ ನೀವು ಪ್ರಶ್ನೆ ಕೇಳಿ.

ರಾಜ್ಯದಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

246 (2226) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ;

ಅ) ರಾಜ್ಯದಲ್ಲಿರುವ ವಿವಿಧ ಆಸ್ಪತ್ರೆಗಳಲ್ಲಿ ಎಷ್ಟು ವೈದ್ಯರ ಹುದ್ದೆಗಳು ಖಾಲಿ ಇವೆ? ಇವುಗಳಲ್ಲಿ ಮಹಿಳಾ ವೈದ್ಯರ ಸಂಖ್ಯೆ ಎಷ್ಟು? ತಾಲ್ಲೂಕುವಾರು ಹಾಗೂ ಆಸ್ಪತ್ರೆವಾರು ಮಾಹಿತಿಯನ್ನು ನೀಡುವುದು;

ಅ) ಈ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ?

ಡಾ: ಎ.ಬಿ.ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 633.
105 ಮಹಿಳಾ ವೈದ್ಯರ ಹುದ್ದೆಗಳು ಖಾಲಿ ಇವೆ.
ತಾಲ್ಲೂಕುವಾರು ಹಾಗೂ ಆಸ್ಪತ್ರೆವಾರು ಪಟ್ಟಿ ಲಗತ್ತಿಸಿದೆ.

ಆ) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿರುವ ವೈದ್ಯರುಗಳನ್ನು ನೇಮಕ ಮಾಡುವ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು 573 ವೈದ್ಯರನ್ನು ನೇಮಕ ಮಾಡುವ ಸಮಯದಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಮಹಿಳಾ ವೈದ್ಯರ ಖಾಲಿ ಹುದ್ದೆಗಳ ವಿವರ- ದಿನಾಂಕ:31-1-2000 ದಲ್ಲಿದ್ದಂತೆ

ಬೆಂಗಳೂರು ನಗರ ಜಿಲ್ಲೆ

1) ಪ್ರಾ.ಆ.ಕೇಂದ್ರ, ವರ್ತೂರು, ಬೆಂಗಳೂರು ದಕ್ಷಿಣ ತಾ:
2) " ಆನೇಕಲ್, ಆನೇಕಲ್ ತಾಲ್ಲೂಕು.

ಬೆಂಗಳೂರು ಗ್ರಾಮಾಂತರ ಜಿಲ್ಲೆ

3) ಪ್ರಾ.ಆ.ಕೇಂದ್ರ, ಸೋಲೂರು, ಮಾಗಡಿ ತಾ:
4) " ಡಿ.ಎಂ.ವಾಡಿ, ಕನಕಪುರ ತಾ:
5) ಸ.ಆ.ಕೇಂದ್ರ, ಮಾಗಡಿ.

ಕೋಲಾರ ಜಿಲ್ಲೆ

6) ಪ್ರಾ.ಆ.ಕೇಂದ್ರ, ಬಾಗೇಪಲ್ಲಿ, ಬಾಗೇಪಲ್ಲಿ ತಾ:
7) " ಘಟಕ, ಕೋಲಾರ ತಾ:
8) ಪ್ರಾ.ಆ.ಕೇಂದ್ರ, ಚಿಂತಾಮಣಿ, ಚಿಂತಾಮಣಿ ತಾ:
9) " ನಾಮಗೊಂಡ್ಲು, "
10) " ಮೇಲೂರು, ಶಿಡ್ಲಘಟ್ಟ ತಾ:
11) " ಮಾರ್ಗಾನುಕುಂಟೆ, ಬಾಗೇಪಲ್ಲಿ ತಾ:

ತುಮಕೂರು ಜಿಲ್ಲೆ

12) ಸಾರ್ವಜನಿಕ ಆಸ್ಪತ್ರೆ, ತಿಪಟೂರು, ತಿಪಟೂರು ತಾ:
13) " ಮಧುಗಿರಿ, ಮಧುಗಿರಿ ತಾ:
14) " ಕೊರಟಗೆರೆ, ಕೊರಟಗೆರೆ ತಾ:
15) ಪ್ರಾ.ಆ.ಕೇಂದ್ರ, ತುರುವೇಕೆರೆ, ತುರುವೇಕೆರೆ ತಾ:
16) " ಬರಗೂರು, ಶಿರಾ ತಾ:
17) " ಕೋಟಿಗುಡ್ಡ, ಪಾವಗಡ ತಾ:
18) ಸಮುದಾಯ ಆರೋಗ್ಯ ಕೇಂದ್ರ, ಶಿರಾ, ಶಿರಾ ತಾ:

ಶಿವಮೊಗ್ಗ ಜಿಲ್ಲೆ

19) ಸಮುದಾಯ ಆರೋಗ್ಯ ಕೇಂದ್ರ, ಸೊರಬ ತಾ:
20) ಸಾರ್ವಜನಿಕ ಆಸ್ಪತ್ರೆ, ಹೊಸನಗರ ತಾ:

ಚಿತ್ರದುರ್ಗ ಜಿಲ್ಲೆ

21) ಪ್ರಾ.ಆ.ಕೇಂದ್ರ, ಸಿರಿಗೆರೆ, ಚಿತ್ರದುರ್ಗ ತಾ:
22) " ನಾಯಕನಹಟ್ಟಿ, ಹಿರಿಯೂರು ತಾ:
23) ಸಾರ್ವಜನಿಕ ಆಸ್ಪತ್ರೆ, ಹೊಸದುರ್ಗ, ಹೊಸದುರ್ಗ ತಾ:

ದಾವಣಗೆರೆ ಜಿಲ್ಲೆ

24) ಸಾರ್ವಜನಿಕ ಆಸ್ಪತ್ರೆ, ಹರಿಹರ, ಹರಿಹರ ತಾ:

25) " ಹರಪನಹಳ್ಳಿ ತಾ:

26) " ಚನ್ನಗಿರಿ ತಾ:

ಮೈಸೂರು ಜಿಲ್ಲೆ

27) ಹೆರಿಗೆ ಆಸ್ಪತ್ರೆ, ಅತ್ತಿಗೋಡು, ಪಿರಿಯಾಪಟ್ಟಣ ತಾ:

28) ಹೆರಿಗೆ ಆಸ್ಪತ್ರೆ, ಹಿರೇಗೌಡನ ದೊಡ್ಡಿ, ನಂಜನಗೂಡು ತಾ:

ಚಾಮರಾಜನಗರ ಜಿಲ್ಲೆ

29) ಪ್ರಾ.ಆ.ಕೇಂದ್ರ, ಯಳಂದೂರು.

30) ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ

ಚಿಕ್ಕಮಗಳೂರು ಜಿಲ್ಲೆ

31) ಪ್ರಾ.ಆ.ಕೇಂದ್ರ, ಪಂಚನಹಳ್ಳಿ

32) " ಲಕ್ಕವಳ್ಳಿ

33) " ದಾರದಹಳ್ಳಿ

34) " ಬಣಕಲ್

35) " ಸಕರಾಯಪಟ್ಟಣ

36) " ಆಲೂರು

37) ಪ್ರಾ.ಆ.ಘಟಕ, ಸುಂಕಶಾಲೆ

38) " ಉತ್ತವೇಶ್ವರ

39) " ಹಿರೇಬೈಲು

ಹಾಸನ ಜಿಲ್ಲೆ

40) ಪ್ರಾ.ಆ.ಕೇಂದ್ರ, ಪಡಸಲ ಹಿಪ್ಪೆ

41) " ಬಸವಪಟ್ಟಣ

42) " ಕೇರಣಪುರ

43) " ಹತ್ತಿಹಳ್ಳಿ

44) " ಯಸಳೂರು

45) ಪ್ರಾ.ಆ.ಘಟಕ, ಚಂಗಡಿಹಳ್ಳಿ

46) ಸಾರ್ವಜನಿಕ ಆಸ್ಪತ್ರೆ, ಬೇಲೂರು.

47) ಸ.ಆ.ಕೇಂದ್ರ, ಆಲೂರು, ಹಾಸನ ಜಿ:

ಮಂಡ್ಯ ಜಿಲ್ಲೆ

48) ಸಾರ್ವಜನಿಕ ಆಸ್ಪತ್ರೆ, ನಾಗಮಂಗಲ

ಗುಲ್ಬರ್ಗಾ ಜಿಲ್ಲೆ

49) ಸಾರ್ವಜನಿಕ ಆಸ್ಪತ್ರೆ, ಚಿಂಚೋಳಿ ತಾ:

50) " ಜೇವರ್ಗಿ ತಾ:

51) ಸ.ಆ.ಕೇಂದ್ರ, ನಿಂಬರ್ಗ, ಆಳಂದ ತಾ:

52) ಪ್ರಾ.ಆ.ಕೇಂದ್ರ, ಇಜೇರಿ, ಜೇವರ್ಗಿ ತಾ:

53) ಸಾರ್ವಜನಿಕ ಆಸ್ಪತ್ರೆ, ಸುರಪುರ, ಸುರಪುರ ತಾ:

54) ಪ್ರಾ.ಆ.ಕೇಂದ್ರ, ಯರಗೋಲ, ಯಾದಗಿರಿ ತಾ:

55) ಸ.ಆ.ಕೇಂದ್ರ, ಗುರ್‌ಮಿಟ್ಟಲ್, ಯಾದಗಿರಿ ತಾ:

56) ಪ್ರಾ.ಆ.ಕೇಂದ್ರ, ದೋರನಹಳ್ಳಿ, ಶಹಾಪುರ ತಾ:

ರಾಯಚೂರು ಜಿಲ್ಲೆ

57) ಸಾರ್ವಜನಿಕ ಆಸ್ಪತ್ರೆ, ಮಾನ್ವಿ, ಮಾನ್ವಿ ತಾ:

58) " ದೇವದುರ್ಗ, ದೇವದುರ್ಗ ತಾ:

ಕೊಪ್ಪಳ ಜಿಲ್ಲೆ

59) ಪ್ರಾ.ಆ.ಕೇಂದ್ರ, ಕವಲೂರು, ಕೊಪ್ಪಳ ತಾ:

60) ಸಾರ್ವಜನಿಕ ಆಸ್ಪತ್ರೆ, ಯಲಬುರ್ಗಾ ತಾ:

61) " ಕುಷ್ಟಗಿ ತಾ:

ಬಳ್ಳಾರಿ ಜಿಲ್ಲೆ

62) ಪ್ರಾ.ಆ.ಕೇಂದ್ರ, ಕಂಪ್ಲಿ, ಹೊಸಪೇಟೆ ತಾ:

63) " ಸಿರಗುಪ್ಪ, ಸಿರಗುಪ್ಪ ತಾ:

64) ಸ.ಆ.ಕೇಂದ್ರ, ಸಂಡೂರು, ಸಂಡೂರು ತಾ:

65) ಪ್ರಾ.ಆ.ಕೇಂದ್ರ, ಹಂಪಾಸಾಗರ, ಹಗರಿಬೊಮ್ಮನಹಳ್ಳಿ ತಾ:

ಹಾವೇರಿ ಜಿಲ್ಲೆ

66) ಸಾರ್ವಜನಿಕ ಆಸ್ಪತ್ರೆ, ಹಾನಗಲ್, ಹಾನಗಲ್ ತಾ:

67) ಪ್ರಾ.ಆ.ಕೇಂದ್ರ, ಅಕ್ಕಿ ಆಲೂರ, "

68) ಸ.ಆ.ಕೇಂದ್ರ, ಕೆ.ಬಂಕಾಪುರ, ಶಿಗ್ಗಾಂವ ತಾ:

69) " ಕೆ.ಸವಣೂರು, "

ಧಾರವಾಡ ಜಿಲ್ಲೆ

70) ಸಾರ್ವಜನಿಕ ಆಸ್ಪತ್ರೆ, ನವಲಗುಂದ, ನವಲಗುಂದ ತಾ:

71) ಪ್ರಾ.ಆ.ಕೇಂದ್ರ, ಅಳ್ನಾವರ, ಧಾರವಾಡ ತಾ:

ವಿಜಾಪುರ ಜಿಲ್ಲೆ

72) ಪ್ರಾ.ಆ.ಕೇಂದ್ರ, ಓಬಲೇಶ್ವರ, ವಿಜಾಪುರ ತಾ:

73) ಪ್ರಾ.ಆ.ಕೇಂದ್ರ, ಕಲಕೇರಿ, ಸಿಂಧಗಿ ತಾ:

74) " ಚಡಚಣ, ಇಂಡಿ ತಾ:

75) ಸ.ಆ.ಕೇಂದ್ರ, ಸಿಂಧಗಿ, ಸಿಂಧಗಿ ತಾ:

76) " ತಡವಲಗಾ, ಇಂಡಿ ತಾ:

ಬಾಗಲಕೋಟೆ ಜಿಲ್ಲೆ

77) ಪ್ರಾ.ಆ.ಕೇಂದ್ರ, ಕಲಾದಗಿ, ಬಾಗಲಕೋಟೆ ತಾ:

78) " ಹುನಗುಂದ, ಹುನಗುಂದ ತಾ:

79) " ಸೂಳೆಬಾವಿ, ಹುನಗುಂದ ತಾ:

80) ಸ.ಆ.ಕೇಂದ್ರ, ಇಳಕಲ್, ಹುನಗುಂದ ತಾ:

81) ಸಾರ್ವಜನಿಕ ಆಸ್ಪತ್ರೆ, ಇಳಕಲ್, ಹುನುಗುಂದ ತಾ:

82) ಪ್ರಾ.ಆ.ಕೇಂದ್ರ, ಪಟ್ಟದಕಲ್, ಬಾದಾಮಿ ತಾ:

83) " ಕೆರೂರ "

84) ಸಾರ್ವಜನಿಕ ಆಸ್ಪತ್ರೆ, ಗುಳೇದಗುಡ್ಡ, ಬಾದಾಮಿ ತಾ:

85) ಪ್ರಾ.ಆ.ಕೇಂದ್ರ, ಗಲಗಲಿ, ಬೀಳಗಿ ತಾ:

86) " ಲೋಕಾಪುರ, ಮುಧೋಳ ತಾ:

87) ಸ.ಆ.ಕೇಂದ್ರ, ಜಮಖಂಡಿ, ಜಮಖಂಡಿ ತಾ:

88) ಪಿ.ಪಿ.ಸಿ. ಜಮಖಂಡಿ "

89) ಪ್ರಾ.ಆ.ಕೇಂದ್ರ, ಸಾವಳಗಿ, "

90) ಸ.ಆ.ಕೇಂದ್ರ, ರಬಕವಿ ಬಹಹಟ್ಟಿ, "

ಕಾರವಾರ, ಉತ್ತರ ಕನ್ನಡ ಜಿಲ್ಲೆ

91) ಪ್ರಾ.ಆ.ಕೇಂದ್ರ, ಹಳಗ, ಕಾರವಾರ ತಾ:

92) " ಅಂಗಡಿ, "

93) ಪ್ರಾ.ಆ.ಘಟಕ, ಅಂಕೋಲ, ಅಂಕೋಲ ತಾ:

94) ಪ್ರಾ.ಆ.ಕೇಂದ್ರ, ಹಿರೇಗುತ್ತಿ, ಕುಮಟ ತಾ:

95) " ಗೋಕರ್ಣ, ತಾ:

96) " ಬಂಕಿಕೊಡ್ಲ, ಕುಮಟ ತಾ:

97) " ಶಿರಾಲಿ, ಭಟ್ಕಳ ತಾ:

98) " ಕೌಡಗಿ, ಸಂದ್ಯಾಪುರ ತಾ:

99) " ಮುಂಡಗೋಡ, ಮುಂಡಗೋಡ ತಾ:

100) " ಜೋಯಿಡಾ ತಾ:

101) ಸ.ಆ.ಕೇಂದ್ರ, ಹಳಿಯಾಳ ತಾ:

ಗದಗ ಜಿಲ್ಲೆ

102) ಪ್ರಾ.ಆ.ಕೇಂದ್ರ, ಮುಳುಗುಂದ, ಪಾವಗಡ ತಾ:

103) ಸ.ಆ.ಕೇಂದ್ರ, ರೋಣ ತಾ:

104) " ಗಜೇಂದ್ರ ಗಡ, ರೋಣ ತಾ:

105) ಸಾರ್ವಜನಿಕ ಆಸ್ಪತ್ರೆ, ಶಿರಹಟ್ಟಿ ತಾ:

ಶ್ರೀ ಹೆಚ್.ಸಿ.ಬಸವರಾಜು : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವ ಸುಮಾರು 105 ಮಹಿಳಾ ವೈದ್ಯರ ಖಾಲಿ ಹುದ್ದೆಗಳನ್ನು ಸರ್ಕಾರ ಇನ್ನೂ ಭರ್ತಿ ಮಾಡಿಲ್ಲ. ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ನಾಲ್ಕು ಹುದ್ದೆಗಳು ಖಾಲಿಯಿದ್ದು ಕಳೆದ ಎರಡು ವರ್ಷಗಳಿಂದ ಮಹಿಳಾ ವೈದ್ಯರು ನೇಮಕ ಗೊಂಡಿಲ್ಲ. ಕಿತ್ತೂರು ಗ್ರಾಮದಲ್ಲಿ ಆಸ್ಪತ್ರೆ ಪ್ರಾರಂಭವಾಗಿದ್ದರೂ ಕೂಡ ಅಲ್ಲಿ ಮಹಿಳಾ ವೈದ್ಯರು ಆಸ್ಪತ್ರೆಯಲ್ಲಿ ಇಲ್ಲ. ಆದಕಾರಣ ಮಹಿಳಾ ವೈದ್ಯರನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ಮಾನ್ಯ ಸಚಿವರು ಈ ಸದನಕ್ಕೆ ತಿಳಿಸಬೇಕು.

ಡಾ: ಎ.ಬಿ.ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಪ್ರತಿ ಬಾರಿಯೂ ಈ ಸದನದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ನೇಮಕದ ಬಗ್ಗೆ ಪ್ರಸ್ತಾಪವಾಗುತ್ತಲೇ ಇದೆ. ಈಗಾಗಲೇ ಹಿಂದೆಯೇ ನಾನು ಈ ಸದನದಲ್ಲಿ ತಿಳಿಸಿರುವಂತೆ ಸುಮಾರು 573 ವೈದ್ಯರ ಆಯ್ಕೆಪಟ್ಟಿ ತಯಾರಾಗಿದ್ದು ಅದರ ಬಗ್ಗೆ ಸರ್ಟಿಫಿಕೇಟ್‌ಗಳ ವೆರಿಫಿಕೇಶನ್ ನಡೆಯುತ್ತಿದೆ. ಈ ಪ್ರಕ್ರಿಯೆಯೆಲ್ಲಾ ಮುಗಿದು ಅದು ನಮಗೆ ಬಂದ ಮೇಲೆ ಮೊದಲು ತಾಲ್ಲೂಕು ಆಸ್ಪತ್ರೆಗಳಿಗೆ ಆದ್ಯತೆಯನ್ನು ಕೊಟ್ಟು ಎಲ್ಲಾ ಮಹಿಳಾ ವೈದ್ಯರನ್ನು ನೇಮಕ ಮಾಡಲಾಗುವುದು.

ಶ್ರೀ ಹೆಚ್.ಸಿ.ಬಸವರಾಜು : ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ತಿಂಗಳಿನಿಂದಲೂ ಕೂಡ ಸರ್ಕಾರ ಇದೇ ಉತ್ತರವನ್ನು ಹೇಳುತ್ತಾ ಬಂದಿದೆ. ಜಿಲ್ಲಾಧಿಕಾರಿಗಳಿಂದ ವರದಿ ಬಂದಮೇಲೆ ನೇಮಕ ಮಾಡುತ್ತೇವೆಂದು ಸರ್ಕಾರ ಏನು ಆಶ್ವಾಸನೆ ಕೊಟ್ಟಿದೆ ಅದು ಇನ್ನೂ ಆಶ್ವಾಸನೆಯಲ್ಲಿಯೇ ಉಳಿದಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರ ನೋವು-ನಲಿವುಗಳನ್ನು ಅರ್ಥ ಮಾಡಿಕೊಂಡು ಆ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರನ್ನು ತುರ್ತಾಗಿ ನೇಮಕ ಮಾಡುವಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯವಿದೆ. ಈ ರೀತಿ ಮಾಡದೆ ಇದರ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಇನ್ನು ಆ ಆಸ್ಪತ್ರೆಗಳಲ್ಲಿ ಎಷ್ಟು ದಿವಸದೊಳಗೆ ಮಹಿಳಾ ವೈದ್ಯರನ್ನು ನೇಮಕ ಮಾಡುತ್ತಾರೆ ಎಂಬ ಬಗ್ಗೆ ಮಾನ್ಯ ಸಚಿವರು ನಿರ್ದಿಷ್ಟವಾಗಿ ಉತ್ತರ ಹೇಳಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ಈ ಸದನದಲ್ಲಿ 15 ದಿವಸಗಳ ಗಡುವನ್ನು ಕೊಡಲಾಗಿತ್ತು. ಆದುದರಿಂದ ನನಗೂ ಇದರ ಬಗ್ಗೆ ಉತ್ತರ ಕೊಡಲು ಬಹಳ ಮುಜುಗರವಾಗಿದೆ. ಈಗಾಗಲೇ ಶೇಕಡ 70ರಷ್ಟು ವೈದ್ಯರ ಸರ್ಟಿಫಿಕೇಟ್‌ಗಳ ವೆರಿಫಿಕೇಶನ್ ಕಾರ್ಯ ಮುಗಿದು ಹೋಗಿದೆ. ಇನ್ನೂ 30 ಪರ್ಸೆಂಟ್ ಸರ್ಟಿಫಿಕೇಟ್ಸ್ ವೆರಿಫಿಕೇಶನ್ ಕಾರ್ಯ ಉಳಿದಿದೆ. ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ, ಎಲ್ಲರ ಸರ್ಟಿಫಿಕೇಟ್‌ಗಳು ಪೂರ್ಣವಾಗಿ ವೆರಿಫೈ ಆಗದೇ ಇರುವಾಗ ನೇಮಕ ಮಾಡಿದರೆ ಸೀನಿಯಾರಿಟಿ ಸಮಸ್ಯೆ ಉಂಟಾಗುತ್ತದೆ. ಇದನ್ನು ನಮ್ಮ ಅಧಿಕಾರಿಗಳು ಹೇಳಿದ್ದಾರೆ. ಆದುದರಿಂದ ಎಲ್ಲಾ ಸರ್ಟಿಫಿಕೇಟ್ಸ್ ವೆರಿಫೈ ಆದ ಮೇಲೆಯೇ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಬೇಕಾಗುತ್ತದೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಇನ್ನೂ ಎರಡು ವಾರಗಳು ಆಗಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಎರಡು ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಹಿಂದೆ ನಮ್ಮ ಸರ್ಕಾರವಿದ್ದಾಗ ಎಲ್ಲೆಲ್ಲಿ ವೈದ್ಯರ ಹುದ್ದೆಗಳು ಖಾಲಿ ಬೀಳುತ್ತದೋ ಅಲ್ಲಿ ರೋಸ್ಟರ್ ಸಿಸ್ಟಂನ್ನು ಅಳವಡಿಸಿ ಜಿಲ್ಲಾಧಿಕಾರಿಗಳೇ ನೇಮಕ ಮಾಡಿಕೊಳ್ಳಲು ಆದೇಶ ಕೊಡಲಾಗಿತ್ತು. ಇದನ್ನು ಈಗಿನ ಸರ್ಕಾರ ನಿಲ್ಲಿಸಿದೆ. ಇನ್ನು ಎರಡನೆಯದಾಗಿ, ಕೆ.ಪಿ.ಸಿ.ಯಿಂದ ನೀವೇನು ಆಯ್ಕೆಯನ್ನು ಮಾಡುತ್ತೀರಿ subject to verification of all the records ಇವುಗಳೆಲ್ಲವೂ ವೆರಿಫೈ ಆಗುವುದಕ್ಕೆ ಮುಂಚೆಯೇ ತಾತ್ಕಾಲಿಕವಾಗಿ ಅವರಿಗೆ ನೇಮಕದ ಆದೇಶವನ್ನು ಹೊರಡಿಸಿ ನಂತರ ಸರ್ಟಿಫಿಕೇಟ್ಸ್ ವೆರಿಫಿಕೇಶನನ್ನು ಮಾಡಿಕೊಳ್ಳಲು ಅವಕಾಶವಿದೆ. ಸಾಮಾನ್ಯವಾಗಿ ವೆರಿಫಿಕೇಶನ್‌ನಲ್ಲೂ 99 ಪರ್ಸೆಂಟ್ ಎಲ್ಲವೂ ಸರಿಯಾಗಿಯೇ ಇರುತ್ತದೆ. ಎಲ್ಲೋ ಒಂದೆರಡು ಕೇಸ್‌ಗಳಲ್ಲಿ ತಪ್ಪಾಗಿದ್ದರೆ

ಅದಕ್ಕೋಸ್ಕರ ನೀವು ಒಂದು ಪ್ರಾವಿಸೋ ಇಟ್ಟುಕೊಂಡು ವೆರಿಫಿಕೇಶನ್‌ನಲ್ಲಿ ಅಡ್‌ವರ್ಸ್ ರಿಪೋರ್ಟ್ ಬಂದರೆ ಅಂಥವರನ್ನು ಕೆಲಸದಿಂದ ತೆಗೆಯಲಾಗುವುದು ಎಂದು ಮೊದಲೇ ಹೇಳಿ ನಂತರ ನೇಮಕವನ್ನು ಮಾಡಿಕೊಳ್ಳಬಹುದು. ಇದರ ಬಗ್ಗೆ ಮಾನ್ಯ ಸಚಿವರು ಅವರ ಅಭಿಪ್ರಾಯವನ್ನು ಹೇಳಬೇಕು.

ಡಾ: ಎ.ಬಿ.ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಸಿಂಧ್ಯಾರವರು ಏನು ಪ್ರಸ್ತಾಪ ಮಾಡಿದ್ದಾರೆ ಇದರಿಂದ ನನಗೆ ಸಂತೋಷವಾಗಿದೆ. ಅವರ ಸರ್ಕಾರವಿದ್ದಾಗ ಈ ವಿಧಾನವನ್ನು ಅಡಾಪ್ಟ್ ಮಾಡಿಕೊಂಡಿದ್ದರು. Subject to Verification of all the records ಎನ್ನುವ ವಿಧಾನದಲ್ಲಿಯೇ ನೇಮಕದ ಆದೇಶವನ್ನು ಕೊಡಲಾಗಿತ್ತು. ಆ ವೈದ್ಯರುಗಳು ಕರ್ತವ್ಯಕ್ಕೆ ಹಾಜರಾಗಿ ಕೆಲಸವನ್ನು ಮಾಡುತ್ತಿದ್ದರು. ಹಾಗೆ ವೆರಿಫಿಕೇಶನ್ ಮಾಡುವ ಕಾಲದಲ್ಲಿ ಇಬ್ಬರು ತಪ್ಪು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆಂದು ಹೇಳಿ ಅವರಿಬ್ಬರನ್ನು ಸರ್ಕಾರ ಕೆಲಸದಿಂದ ಡಿಸ್‌ಮಿಸ್ ಮಾಡಿತು. ಅವರಿಬ್ಬರ ಡಿಸ್‌ಮಿಸ್ ಆದಮೇಲೆ ಅವರು ಕೋರ್ಟ್‌ಗೆ ಹೋದರು. ಕೋರ್ಟ್‌ನಲ್ಲಿ ಏನು ಅಬ್ಸರ್ವೇಶನ್ ಬಂದಿದೆಯೆಂದರೆ " You are putting the carts before the horse " ನೇಮಕಾತಿ ಮಾಡತಕ್ಕಂಥ ಕೆಲಸ ಅಷ್ಟೊಂದು ಸರಳ ಕೆಲಸವಲ್ಲ. ಮೊದಲೇ ಎಲ್ಲಾ ಸರ್ಟಿಫಿಕೇಟ್‌ಗಳನ್ನು ವೆರಿಫಿಕೇಶನ್ ಮಾಡಿ ತದನಂತರವೇ ನೇಮಕಾತಿಯನ್ನು ಮಾಡಬೇಕೇ ಹೊರತು ಸಬ್ಜೆಕ್ಟ್ ಟು ವೆರಿಫಿಕೇಶನ್ ಎಂದು ನೇಮಕಾತಿ ಮಾಡಬಾರದು ಎಂದು ಕೋರ್ಟ್ ಹೇಳಿರುವುದರಿಂದಲೇ ಹಿಂದಿನ ವಿಧಾನವನ್ನು ಕೈಬಿಟ್ಟು ಎಲ್ಲಾ ಸರ್ಟಿಫಿಕೇಟ್‌ಗಳ ವೆರಿಫಿಕೇಶನ್ ಆದಮೇಲೆಯೇ ನೇಮಕಾತಿ ಆದೇಶವನ್ನು ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅದು ಕೊನೆಯ ಹಂತದಲ್ಲಿದೆ. ಇದಲ್ಲದೇ ನಿನ್ನೆ ವಿಧಾನ ಪರಿಷತ್ತಿನಲ್ಲಿ ಶ್ರೀ ನಾಣಯ್ಯನವರು ಒಂದು ಸಲಹೆ ಕೊಟ್ಟು ಅಭ್ಯರ್ಥಿಗಳಿಂದ ಅಫಿಡ್‌ವಿಟ್ ಪಡೆದುಕೊಂಡು ನೇಮಕವನ್ನು ಮಾಡಬಹುದು ಎಂದು ಹೇಳಿದರು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಹಿಂದೆ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶವನ್ನು ಕೊಟ್ಟಿತ್ತು. ಅದನ್ನೇ ನೀವು ನಿಲ್ಲಿಸಿದ್ದೀರಿ. ಇದರ ಬಗ್ಗೆ ಹೇಳಿ.

ಡಾ: ಎ.ಬಿ.ಮಾಲಕರೆಡ್ಡಿ : ಹಿಂದೆ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕಾತಿ ಮಾಡಲಾಗುತ್ತಿತ್ತು. ಈಗಿನ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಅದನ್ನು ಸ್ಥಗಿತಗೊಳಿಸಲಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಅದನ್ನು ಏಕೆ ಸ್ಥಗಿತಗೊಳಿಸಬೇಕು? ನಮ್ಮ ಸರ್ಕಾರವಿದ್ದಾಗ ನಾವೇನು ಮಾಡಿದ್ದೆವೆಂದರೆ ಒಂದು ಜಿಲ್ಲೆಯಲ್ಲಿ ನಾಲ್ಕೈದು ಹುದ್ದೆಗಳು ಖಾಲಿ ಇದ್ದರೂ ಕೂಡ ಇಮ್ಮೆಡಿಯೆಟ್ ಆಗಿ ಒಂದು ಪ್ರಯಾರಿಟಿ ಲಿಸ್ಟ್ ಮಾಡಿಕೊಂಡು ಅದರಿಂದ ಆಪರೇಟ್ ಮಾಡಿ ಖಾಲಿ ಇದ್ದ ಹುದ್ದೆಯನ್ನು ತುಂಬುತ್ತಿದ್ದೆವು. ಹಿಂದೆ ರಿಸರ್ವ್ ಕಮ್ ಲೀವ್ ವೆಕೆನ್ಸಿಗಳೆಂದು ಡಿ.ಹೆಚ್.ಓ.ಗಳ ಹತ್ತಿರವೇ ನಾಲ್ಕೈದು ಜನ ಡಾಕ್ಟರ್‌ಗಳು ಇರುತ್ತಿದ್ದರು. ಈಗ ಅಲ್ಲಿಯೂ ಡಾಕ್ಟರಿಲ್ಲದೇ ಆಸ್ಪತ್ರೆಗಳು ದುಸ್ಥಿತಿಗೆ ಬಂದಿವೆ. ಆದಕಾರಣ ನೀವು ಇವೆರಡನ್ನು ಮತ್ತೆ ಜಾರಿಗೆ ತರುವುದಕ್ಕೆ ಏನು ತೊಂದರೆ? ಇದನ್ನು ದಯವಿಟ್ಟು ತಾವು ಮಾಡಬೇಕೆಂದು ನಾನು ಒತ್ತಾಯಪಡಿಸುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ : ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವುದು ನಿರಂತರ ಪ್ರೊಸಸ್ ಆಗಿದೆ. ಇದನ್ನು ಏಕೆ ಸ್ಥಗಿತಗೊಳಿಸಲಾಯಿತೆಂದರೆ ಈಗಾಗಲೇ 573 ವೈದ್ಯರನ್ನು ಆಯ್ಕೆ ಮಾಡಿರುವುದರಿಂದ ಇವರುಗಳಿಗೆ ಜಾಗಗಳನ್ನು ತೋರಿಸಬೇಕಾದ ದೃಷ್ಟಿಯಿಂದ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಲಾಯಿತು.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ, ವೈದ್ಯರ ನೇಮಕವಾಗದೇ ಆಸ್ಪತ್ರೆಗಳಲ್ಲಿ ಸಮಸ್ಯೆ ಉದ್ಭವಿಸಿರುವುದು ಇಡೀ ರಾಜ್ಯವ್ಯಾಪಿಯಾಗಿದೆ. ಆದುದರಿಂದ ಹಿಂದೆ ಯಾವ ರೀತಿಯಲ್ಲಿ ಜಿಲ್ಲಾಧಿಕಾರಿಗಳಿಗೆ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅವಕಾಶವನ್ನು ಕೊಡಲಾಗಿತ್ತೋ ಅದೇ ರೀತಿಯಲ್ಲಿ ಮತ್ತೆ ಅಧಿಕಾರವನ್ನು ಅವರಿಗೆ ಕೊಟ್ಟರೆ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆಯೇ ಹೊರತು ಸರ್ಕಾರ ಖಾಯಂ ವೈದ್ಯರನ್ನು ನೇಮಕಾತಿ ಮಾಡಿದ ಮೇಲೆಯೇ ವೈದ್ಯರನ್ನು ಆಸ್ಪತ್ರೆಗಳಿಗೆ ಕಳುಹಿಸುತ್ತೇವೆ ಎಂದರೆ ಇದಕ್ಕೆ ಪರಿಹಾರವೇ ಸಿಗದೇ ಇರುವಂಥ ಸ್ಥಿತಿ ಇದೆ. ಆದುದರಿಂದ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ತೆಗೆದುಕೊಳ್ಳುವ ನಿರ್ಣಯವನ್ನು ಸರ್ಕಾರ ಮಾಡಬೇಕು. ಇನ್ನು ನನ್ನ ಕ್ಷೇತ್ರವಾದ ಅಂಕೋಲಾದಲ್ಲಿರುವ ಆಸ್ಪತ್ರೆಗೆ ಇದುವರೆಗೆ ಮಹಿಳಾ ವೈದ್ಯರೇ ಇಲ್ಲ. ಅಂತಹ ಪರಿಸ್ಥಿತಿ ಇದೆ. ಇದರ ಬಗ್ಗೆಯೂ ಕೂಡ ಸರ್ಕಾರ ಗಮನ ಹರಿಸಬೇಕು.

ಶ್ರೀ ಹೆಚ್.ಸಿ.ಬಸವರಾಜು : ಮಾನ್ಯ ಅಧ್ಯಕ್ಷರೇ, ಪಿರಿಯಾಪಟ್ಟಣದ ತಾಲ್ಲೂಕು ಅತ್ತಿಗೋಡು ಗ್ರಾಮದಲ್ಲಿ ಎರಡು ವರ್ಷಗಳ ಹಿಂದೆಯೇ ಒಂದು ಹೆರಿಗೆ ಆಸ್ಪತ್ರೆಯನ್ನು ಸರ್ಕಾರ ಮಂಜೂರು ಪ್ರಾರಂಭ ಮಾಡಿ ಕೇವಲ ಖಾಲಿ ಬಿಲ್ಡಿಂಗ್ ಇದೆಯೇ ಹೊರತು ಅಲ್ಲಿಗೆ ಮಹಿಳಾ ವೈದ್ಯರನ್ನು ನರ್ಸ್‌ಗಳನ್ನು ಮತ್ತು ನಾಲ್ಕನೇ ದರ್ಜೆ ನೌಕರರನ್ನು ನೇಮಕ ಮಾಡಿಲ್ಲ. ಸರ್ಕಾರ ಆಸ್ಪತ್ರೆಯನ್ನು ಪ್ರಾರಂಭ ಮಾಡಿದ ಮೇಲೆ ಸರಿಯಾದಂಥ ವೈದ್ಯರ ವ್ಯವಸ್ಥೆಯನ್ನೂ ಕೂಡ ಮಾಡಬೇಕು. ಅದನ್ನು ಮಾಡದಿದ್ದರೆ ಜನರಿಗೆ ತೊಂದರೆಯಾಗುತ್ತದೆಯಾದ ಕಾರಣ ಇದರ ಬಗ್ಗೆ ಸರ್ಕಾರ ಗಮನ ಹರಿಸಿ ಈ ಬಾರಿ ಆದ್ಯತೆಯ ಮೇಲೆ ವೈದ್ಯರನ್ನು ಆ ಗ್ರಾಮಕ್ಕೆ ನೇಮಕ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ : ಇದರ ಬಗ್ಗೆ ಈಗಾಗಲೇ ನನ್ನ ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಎ.ಕೃಷ್ಣಪ್ಪ : ನಮ್ಮಲ್ಲಿ ಆಸ್ಪತ್ರೆಗೆ ಎರಡು ವರ್ಷಗಳ ಹಿಂದೆಯೇ ಎರಡು ವ್ಯಾನ್‌ಗಳನ್ನು ಕೊಟ್ಟಿದ್ದಾರೆ. ಆದರೆ ಚಾಲಕರನ್ನು ಅಲ್ಲಿಗೆ ನೇಮಕ ಮಾಡಿಲ್ಲ. ಇದರ ಬಗ್ಗೆ ಮಂತ್ರಿಗಳನ್ನು ಕೇಳಿದರೆ ಚಾಲಕರನ್ನು ಜಿಲ್ಲಾಧಿಕಾರಿಗಳೇ ನೇಮಕ ಮಾಡಬಹುದು ಎನ್ನುತ್ತಾರೆ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮಗೆ ತಾತ್ಕಾಲಿಕವಾಗಿಯಾದರೂ ಸಹ ಚಾಲಕರನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲವೆನ್ನುತ್ತಾರೆ. ಮಾನ್ಯ ಸಚಿವರು ದಯವಿಟ್ಟು ಇದರ ಬಗ್ಗೆ ಗಮನಹರಿಸಿ ಚಾಲಕರನ್ನು ಅತಿ ಶೀಘ್ರವಾಗಿ ನೇಮಕ ಮಾಡಬೇಕು.

ಡಾ: ಎ.ಬಿ.ಮಾಲಕರೆಡ್ಡಿ : ಚಾಲಕರ ನೇಮಕದ ಬಗ್ಗೆ ಈಗ ಸಂದರ್ಶನಗಳು ನಡೆಯುತ್ತಿವೆ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೆ ಈಗ ಪ್ರಶ್ನೆ ಇರುವುದು ವೈದ್ಯಾಧಿಕಾರಿಗಳ ನೇಮಕದ ಬಗ್ಗೆ ನೀವು ವ್ಯಾನ್‌ಗಳ ಬಗ್ಗೆ ಬೇರೆ ಪ್ರಶ್ನೆ ಕೇಳಿ. ಅದಕ್ಕೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎನ್.ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ವೈದ್ಯಾಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡಬೇಕಾದರೆ ಅವರಿಗೆ ಬೇಕಾದಂಥ ವ್ಯವಸ್ಥೆಗಳನ್ನು ಸರಿಯಾಗಿ ಮಾಡಿಕೊಡಬೇಕಾದ ಅವಶ್ಯಕತೆ ಇದೆ. ಈಗಾಗಲೇ 65 ಸ್ಟಾಫ್ ನರ್ಸ್‌ಗಳನ್ನು ಸೆಲೆಕ್ಷನ್ ಮಾಡಿದ್ದರೂ ಕೂಡ ಚೀಫ್ ಸೆಕ್ರೆಟರಿ ಲೆವಲ್‌ನಲ್ಲಿಯೇ ಇನ್ನೂ ರಿಲೀಸ್ ಮಾಡಿಲ್ಲ. ವಿಶೇಷವಾಗಿ ದಕ್ಷಿಣ ಕನ್ನಡದಲ್ಲಿ ಬ್ಲಡ್ ಬ್ಯಾಂಕ್ ಇದೆಯಾದರೂ ಲ್ಯಾಬೊರೇಟರಿ ಟೆಕ್ನಿಶಿಯನ್‌ಗಳು ಇಲ್ಲ. ಈ ಕಡೆಯಲ್ಲಿ ಆ್ಯಂಬುಲೆನ್ಸ್ ವ್ಯಾನ್‌ಗಳಿದ್ದರೂ ಅದಕ್ಕೆ ಚಾಲಕರು ಇಲ್ಲ. ಈ ರೀತಿಯಾದರೆ ವೈದ್ಯಾಧಿಕಾರಿಗಳು ಕೆಲಸ ಮಾಡುವುದಾದರೂ ಹೇಗೆ? ಆದುದರಿಂದ ಈ ವ್ಯವಸ್ಥೆಗಳನ್ನು ಸರಿ ಮಾಡಲು ತಕ್ಷಣ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೀರಾ?

ಡಾ: ಎ.ಬಿ.ಮಾಲಕರೆಡ್ಡಿ : ಅಧ್ಯಕ್ಷರೆ, ಪಾರಾ ಮೆಡಿಕಲ್ ಸ್ಟಾಫ್ ಅಪಾಯಿಂಟ್‌ಮೆಂಟ್ ಎಲ್ಲಾ ಕಡೆಯಲ್ಲಿಯೂ ನಡೆಯುತ್ತಿದೆ. ಮಂಗಳೂರಿನಲ್ಲಿ ಏಕೆ ನಡೆಯುತ್ತಿಲ್ಲವೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಸಚಿವರು 633 ವೈದ್ಯರ ಹುದ್ದೆಗಳು ಖಾಲಿ ಇವೆಯೆಂದೂ, ಅದರಲ್ಲಿ 573 ವೈದ್ಯರನ್ನು ನೇಮಕ ಮಾಡಲಾಗುವುದೆಂದು ಹೇಳಿದರು. ಹಾಗಾದರೆ ಉಳಿದ ವೈದ್ಯರ ಹುದ್ದೆಗಳನ್ನು ತುಂಬಲು ಏನುಕ್ರಮ ತೆಗೆದುಕೊಳ್ಳುತ್ತೀರಿ? ಇನ್ನು ಜಿಲ್ಲಾಧಿಕಾರಿಗಳಿಗೆ ವರದಿ ಕಳುಹಿಸಲು ಹೇಳಿ ಎಷ್ಟು ದಿವಸಗಳಾಗಿದೆ? ವರದಿಯನ್ನು ಸಕಾಲಕ್ಕೆ ಕಳುಹಿಸಿಲ್ಲದ ಅಧಿಕಾರಿಗಳ ಮೇಲೆ ಇದುವರೆಗೆ ಯಾರ್ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಜಿಲ್ಲಾಧಿಕಾರಿಗಳಿಗೆ ಎರಡು, ಮೂರು ವರ್ಷಗಳ ಕಾಲ ಅವಕಾಶ ಕೊಟ್ಟರೂ ಇನ್ನೂ ವರದಿಯನ್ನು ಏಕೆ ಕೊಟ್ಟಿಲ್ಲ? ಅದು ಹಾಗೆಯೇ ಬಿದ್ದಿರಬೇಕೇ? ನಾವು ಹಿಂದೆ ಡಿ.ಸಿ.ಗಳಿಗೆ ಕಳುಹಿಸಿದಾಗ ತಕ್ಷಣ ವರದಿ ತರಿಸಿಕೊಂಡೆವು. ಆದರಲ್ಲಿ ಕೆಲವು ಜಿಲ್ಲಾಧಿಕಾರಿಗಳು ಹಿಂದುಳಿದು ಆ ಫೈಲ್‌ಗಳನ್ನು ಹಾಗೆಯೇ ಇಟ್ಟುಕೊಂಡು ಬಿಟ್ಟಿರುತ್ತಾರೆ. ಏಕೆ ಹಾಗೆಯೇ ಇಟ್ಟುಕೊಂಡಿರುತ್ತಾರೆ ಎಂಬುದನ್ನು ನೀವೇ ತಿಳಿದುಕೊಂಡಿದ್ದೀರಿ. ಅದರ ಬಗ್ಗೆ ನಾನೇನೂ ಹೇಳಬೇಕಾಗಿಲ್ಲ. ಅದರ ಉದ್ದೇಶವೇ ಬೇರೆ ಇರುತ್ತದೆಯಾದ ಕಾರಣ ಅವರನ್ನು ಅಲ್ಲಿಗೇ ಹೋಗಿ ಭೇಟಿಯಾಗಬೇಕು. ಇದು ನಡೆಯುತ್ತಿರುವ ವ್ಯವಹಾರವಾಗಿದೆ. ಆದುದರಿಂದ ಯಾರು ಇಷ್ಟು ದಿವಸವಾದರೂ ವರದಿಯನ್ನು ಕಳುಹಿಸಿಲ್ಲವೆನ್ನುವುದನ್ನು ನೋಡಿ ಕ್ರಮ ತೆಗೆದುಕೊಳ್ಳಿ. ಅಲ್ಲಿರುವ ಕಾರಕೂನರೇ ಇದನ್ನು ಮಾಡುವುದು. ನಮ್ಮ ಕಡೆ ಕಾರಕೂನರನ್ನು ಚಿತ್ರಗುಪ್ತರು ಎನ್ನುತ್ತೇವೆ. ವೈದ್ಯರ ನೇಮಕಾತಿ ಬಗ್ಗೆ ಕನಿಷ್ಟ 15 ದಿವಸಗಳ ಕ್ರಮ ತೆಗೆದುಕೊಂಡು ಆ ವೈದ್ಯರ ಹುದ್ದೆಗಳನ್ನು ತುಂಬಲಾಗುತ್ತದೆಯೇ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಒಂದು ವೇಳೆ ತುಂಬಲಾಗದಿದ್ದರೆ ಅಲ್ಲಿಯವರೆಗೆ ಒಂದು ಆದೇಶ ಹೊರಡಿಸಿ ಯಾವ ಕಾಯಿಲೆಯೂ ಬರಬಾರದು ಎಂದು ಹೇಳಿಬಿಡಿ, ಇಂದು ಹಳ್ಳಿಗಳಲ್ಲಿ ನಾವು ಜನರಿಂದ ಬೈಗುಳಗಳನ್ನು ಕೇಳುವ ಪರಿಸ್ಥಿತಿ ಇದು ಬಂದು ಬಿಟ್ಟಿದೆ. ಮಾನ್ಯ ಸಚಿವರಿಗೂ ಗೊತ್ತಿದೆ.

ಡಾ: ಎ.ಬಿ.ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಖಾಲಿ ಇರುವಂತಹ ಹುದ್ದೆಗಳು 633 ಇದೆ; ಹಾಗೂ ನೇಮಕ ಮಾಡಿರುವುದು 573 ಹುದ್ದೆಗಳು. ಆ 633 ಹುದ್ದೆಗಳು ಸಬ್ಸ್ಟ್ಯಾನ್ಷಿಯಲ್ ವೇಕೆನ್ಸೀಸ್ ಅಲ್ಲ. ಡಾಕ್ಟರುಗಳು ಪಿ.ಜಿ. ಸಲುವಾಗಿ ಎಂದು ಹೋಗಿರುತ್ತಾರೆ; ಸುಮಾರು 100 ರಿಂದ 200 ವೇಕೆನ್ಸಿ ಪಿ.ಜಿ.ಗೆ ಎಂದು ಇರುತ್ತವೆ. ಹೀಗಾಗಿ ಅವು ಖಾಲಿ ಇರುತ್ತವೆ. ಅವರು ಪಿ.ಜಿ ಕೋರ್ಸ್ ಮುಗಿಸಿಕೊಂಡು ಬಂದಕೂಡಲೇ ಕೆಲಸಕ್ಕೆ ಅಟೆಂಡ್ ಆಗುತ್ತಾರೆ. ಸಬ್ಸ್ಟ್ಯಾನ್ಷಿಯಲ್ ವೇಕೆನ್ಸಿಸ್ 573 ಹುದ್ದೆಗಳು ಇದ್ದು ಅಷ್ಟು ಅಪಾಯಿಂಟ್ ಮಾಡಿದೆ. ಈ ಡಿಪಾರ್ಟ್ಮೆಂಟ್‌ನಲ್ಲಿ ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚು ವೈದ್ಯರ ಮೇಲೆ ಡಿಸಿಪ್ಲಿನರಿ ಪ್ರೊಸೀಡಿಂಗ್ಸ್ ಪೆಂಡಿಂಗ್ ಇದೆ. ಅದರಲ್ಲಿ ಅನೇಕ ಜನರು ಸಸ್ಪೆಂಡ್ ಆಗಿದ್ದಾರೆ. ಕೆಲವು ಜನರು ಸಸ್ಪೆಂಡ್ ಆಗಲಾಗದೆ ಡಿಸಿಪ್ಲಿನರಿ ಪ್ರೊಸೀಂಡಿಂಗ್ಸ್ ನಡೆದೇ ಇದೆ. ಈಗ ಅಲ್ಲಿ ಕೆಲವೊಂದು ವೇಕೆನ್ಸೀಸ್ ಸಾಕಷ್ಟು ಇದೆ. ಹೀಗಾಗಿ ಡಾಕ್ಟರ್‌ಗಳ ಸೇವೆಗೆ ತೊಂದರೆಯಾಗಿದೆ. ಅದನ್ನು ತಾವು ಸ್ವಲ್ಪ ಸಹಿಸಿಕೊಳ್ಳಬೇಕು. 573 ಹುದ್ದೆಗಳನ್ನು ನಾವು ಏನು ನೇಮಕ ಮಾಡಿದ್ದೇವೆ, ಅವರಿಗೂ ಕೂಡ ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟಮೇಲೆ ಅವರೆಲ್ಲರೂ ಬಂದು ಜಾಯಿನ್ ಆಗುತ್ತಾರೆಂದು ತಿಳಿದುಕೊಳ್ಳಬೇಡಿ. ಪಬ್ಲಿಕ್ ಸರ್ವಿಸ್ ಕಮಿಷನ್‌ನಿಂದ 783 ಮಂದಿ ನೇಮಕವಾದರೂ ಕೂಡ ಅದರಲ್ಲಿ ಜಾಯಿನ್ ಆದವರು 243 ಜನ ಮಾತ್ರ. ಬಹಳಷ್ಟು ಜನ ಹಳ್ಳಿಗೆ ಹೋಗಲು ಇಚ್ಛಿಸದ ಕಾರಣ ಬಹಳ ರೆಸಿಸ್ಟೆನ್ಸ್ ಕೂಡ ಇದೆ. ಇದು ಸಮಸ್ಯೆಯಾಗುತ್ತಿದೆ. ಅಷ್ಟಾದರೂ ಕೂಡ ನಾವು ಇನ್ನು ಹೊಸ ದವಾಖಾನೆಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ತಾವು ಕೇಳುತ್ತಲೇ ಇರುತ್ತೀರಿ. ಇದಕ್ಕೆ ತತ್‌ಕ್ಷಣ ವ್ಯವಸ್ಥೆ ಮಾಡುವುದಕ್ಕೆ ಆಗುತ್ತಿಲ್ಲ. ಈ ರೀತಿಯ ಪರಿಸ್ಥಿತಿಯಾಗಿದೆ; ಏನು ಮಾಡುವುದಕ್ಕಾಗುತ್ತದೆ? ಇದು ನಾವು ನೀವು ಎಲ್ಲರೂ ಕುಳಿತು ವಿಚಾರ ಮಾಡತಕ್ಕಂಥ ಸಮಸ್ಯೆ.

ಶ್ರೀ ಎಸ್.ಎಸ್.ಪಾಟೀಲ್ : ನೀವು ಸ್ವಲ್ಪ ಸಮಾಧಾನವಾಗಿ ಇರಿ ಎಂದು ಹೇಳುತ್ತೀರಿ. ನೀವು ನಿಮ್ಮ ಕ್ಷೇತ್ರದಲ್ಲಿ ಸಮಾಧಾನ ಮಾಡುವುದಕ್ಕಾಗುತ್ತದೆಯೇ? ಪ್ರಾಮಾಣಿಕವಾಗಿ ನೀವೇ ಹೇಳಿ, ಹೇಗೆ ಮಾಡುವುದು? ಏನೇನೋ ಮಾಡುವುದಕ್ಕೆ ಹೊರಟಿರಿ, ಕಿಟ್ಸ್ ಕೊಡುವುದಕ್ಕೆ ಹೊರಟಿರಿ, ಎಲ್ಲಾ ಹೇಳಿದಿರಿ, ಆದರೆ ಅಲ್ಲಿ ಡಾಕ್ಟರ್ ಇಲ್ಲದಿದ್ದರೆ ಏನು ಮಾಡಬೇಕು? ಇದು ಬಹಳ ಗಂಭೀರವಾದ ವಿಚಾರ. ನೀವು 500 ಡಾಕ್ಟರಗಳನ್ನು ತುಂಬಿದರೂ ಮತ್ತೆ ಒಂದು ಸಾವಿರ ಹುದ್ದೆಗಳು ಖಾಲಿ ಇದ್ದಾವೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳುವುದನ್ನು ನೀವು ತೆಗೆದುಕೊಳ್ಳಿ. ಆದರೆ ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಎಂದು ಹೇಳಬೇಕು.

ಡಾ: ಎ.ಬಿ.ಮಾಲಕರೆಡ್ಡಿ : ಮಾನ್ಯ ಸದಸ್ಯರ ಕಳಕಳಿ ಏನಿದೆ ಅದನ್ನು ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ಚರ್ಚೆಮಾಡಿ ಅದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈಗ ಸದ್ಯಕ್ಕೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರ್‌ಗಳನ್ನು ನೇಮಕಾತಿ ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಿದ್ದೇವೆಂದು ಹೇಳಿದರು. ಕಳೆದ ತಿಂಗಳು ಡಿ.ಸಿ. ಯವರಿಗೆ ಅಧಿಕಾರ ಕೊಟ್ಟು ಕಾಂಟ್ರಾಕ್ಟ್ ಬೇಸಿಸ್ ಮೇಲೆ

ಅಪಾಯಿಂಟ್ ಮಾಡಿದರು. ಇದನ್ನು ಏಕೆ ನೀವು ಸ್ಟಾಪ್ ಮಾಡಿದಿರಿ? ಈಗ ನಮ್ಮ ಕ್ಷೇತ್ರದಲ್ಲಿ ಏಳು ಜನ ಡಾಕ್ಟರ್‌ಗಳು ಇಲ್ಲ. ಒಬೊಬ್ಬ ಡಾಕ್ಟರ್‌ನ್ನು ಮೂರು ಮೂರು ಕಡೆ ಹಾಕಿದರೆ ಅವರು ಎಲ್ಲೂ ಕೆಲಸ ಮಾಡುವ ಹಾಗಿಲ್ಲ. ಡಾಕ್ಟರ್‌ಗಳು ಎಂದರೆ, ಖಾಯಿಲೆ ಬಂದರೆ ನೋಡುವುದಕ್ಕೆ ಅವರ ಅವಶ್ಯಕತೆ ಎಷ್ಟು ಇದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಮನಗಾಣಬೇಕು. ಈಗ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ವೈದ್ಯರನ್ನು ತೆಗೆದುಕೊಳ್ಳುವುದನ್ನು ಸ್ಥಗಿತಗೊಳಿಸಿದ್ದೀರಿ. ಮತ್ತೆ ಪಿ.ಹೆಚ್.ಸಿ.ಯಿಂದ ಆಗಲಿ, ತುರ್ತಾಗಿ ಯಾವಾಗ ವೈದ್ಯರನ್ನು ನೇಮಕಾತಿ ಮಾಡುತ್ತೀರೆಂದು, ಈ ಸಭೆಗೆ ತಿಳಿಸಬೇಕೆಂದು ಹೇಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ : ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೆ ತಾವು ಸರಿಯಾದ ಉತ್ತರ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಸಿ.ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರ್ ಅನ್ನು ಅಪಾಯಿಂಟ್ ಮಾಡಿಕೊಳ್ಳುವುದನ್ನು ತಕ್ಷಣದಲ್ಲಿ ಸ್ಥಗಿತಗೊಳಿಸಿದ್ದೇವೆ ಎಂದು ಹೇಳಿದರು. ಇವತ್ತು ಮಾನ್ಯ ಸಿಂಧ್ಯರವರು ಹೇಳಿದ ರೀತಿಯಲ್ಲಿ 800 ಹುದ್ದೆಗಳು ಖಾಲಿ ಇವೆ. ನನ್ನ ಕ್ಷೇತ್ರದಲ್ಲಿ ಏಳು ಹುದ್ದೆಗಳು ಖಾಲಿ ಇದೆ. ಆಸ್ಪತ್ರೆಗೆ ಬರತಕ್ಕಂಥ ರೋಗಿಗಳಿಗೆ ಚಿಕಿತ್ಸೆಯನ್ನು ಕೊಡತಕ್ಕಂಥ ಒಂದು ಸವಲತ್ತನ್ನು ಮಾಡದೇ ಇದ್ದರೆ ಹೇಗೆ? ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ವೈದ್ಯರನ್ನು ತೆಗೆದುಕೊಳ್ಳುವುದನ್ನು ಸ್ಥಗಿತಗೊಳಿಸಿದ್ದೀರಿ ನಿಜ. ಅದು ಹೋಗಲಿ ಆದರೆ ಪಿ.ಹೆಚ್.ಸಿ. ಯಿಂದಾಗಲಿ, ಮತ್ತೊಂದು ವ್ಯವಸ್ಥೆಯಿಂದಾಗಲಿ ಡಾಕ್ಟರ್‌ನ್ನು ಕೊಡುವಂತಹ ವ್ಯವಸ್ಥೆಯನ್ನು ಯಾವಾಗ ಮಾಡುತ್ತೀರಿ? ಈ ತಕ್ಷಣದಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ? ಇನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ಎನ್ನುವುದನ್ನು ತಾವು ಈ ಸಭೆಗೆ ತಿಳಿಸಬೇಕು.

M.R. SPEAKER : It is a common affair in each and every taluk, including my taluk. ಆದಷ್ಟು ಬೇಗ ಇದರ ಬಗ್ಗೆ ಶೀಘ್ರ ಕಾರ್ಯಕ್ರಮ ಕೈಗೊಳ್ಳಿ.

ಡಾ: ಎ.ಬಿ.ಮಾಲಕರೆಡ್ಡಿ : ಇದರ ಬಗ್ಗೆ 2-3 ಬಾರಿ ಉತ್ತರ ಹೇಳಿದ್ದೇನೆ. ಮತ್ತೆ ಅದನ್ನೇ ರಿಪೀಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು : 2-3 ದಿವಸದಲ್ಲಿ ಮಾಡುತ್ತೇವೆಂದು ಹೇಳಿದ ಮೇಲೆ Further supplementary doesn't arise. Next question.

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕೊರತೆ

249 (1745) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ ಕ್ಷೇತ್ರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;